ಫೋನ್ ನಂ. 080-22100409
ಫ್ಯಾಕ್ಸ್ ನಂ. 080-22278803
ವೆಬ್ ಸೈಟ್: https://kptcl.karnataka.gov.in
ಇ-ಮೇಲ್:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): U40109KA1999SGC025521
ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.

ನಂ: ಕವಿಪ್ರನಿನಿ/ಬಿ19/345/85-86

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560009,
ದಿನಾಂಕ: 09.03.2021

## ಸುತ್ತೋಲೆ

ವಿಷಯ:-ವಿದ್ಯುತ್ ಸ್ವೀಕರಣಾ/ವಿತರಣಾ ಕೇಂದ್ರಗಳಲ್ಲಿ ನಿರ್ವಹಣಾ/ದುರಸ್ಥಿ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಎಲ್ಲಾ ಅಗತ್ಯ ಮುಂಜಾಗ್ರತಾ ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಂಡು ವಿದ್ಯುತ್ ಅವಘಡಗಳನ್ನು ತಡೆಗಟ್ಟುವ ಕುರಿತಂತೆ.

ಉಲ್ಲೇಖ:- 1. ನಿಗಮದ ಸುತ್ತೋಲೆ ಸಂಖ್ಯೆ: ಬಿ28(ಎ)/39946/2013-14 ದಿ: 09.03.2015.
2. ಮುಖ್ಯ ಇಂಜಿನಿಯರ್ (ವಿ), ಟಿ.ಎ ಮತ್ತು ಕ್ಯೂ.ಸಿ ರವರ ಪತ್ರ ಸಂಖ್ಯೆ: FF-06/206-Safety/CEE/TAF&QC/KCO-51/15734/2014-15/9527-40 ದಿ: 23.03.2015.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ14/6014/2002-03/ಬೆಂಗಳೂರು ದಿ: 27.12.2018.
4. ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ: 08.03.2021

*******

ಕವಿಪ್ರನಿನಿ ವ್ಯಾಪ್ತಿಯಲ್ಲಿನ ವಿವಿಧ 220 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರ ಹಾಗೂ 110/66 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪೆನಿಗಳ ವಿದ್ಯುತ್ ವಿತರಣಾ ಮಾರ್ಗಗಳಲ್ಲಿ, ಅವಶ್ಯಕ ಮುಂಜಾಗ್ರತಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ, ವಿದ್ಯುತ್ ಸಂಬಂಧಿತ ಅಪಘಾತಗಳು ದಿನೇದಿನೇ ಹೆಚ್ಚುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ, ಹಲವಾರು ವಿದ್ಯುತ್ ಸಂಬಂಧಿತ ಅವಘಡಗಳು ಸಂಭವಿಸುತ್ತಿದ್ದು, ವಿ.ಸ್ವೀ.ಕೇಂದ್ರ/ವಿ.ವಿ.ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳ ಮತ್ತು ಸಾರ್ವಜನಿಕರ ಜೀವಕ್ಕೆ ಹಾಗೂ ಬೆಲೆಬಾಳುವ ಯಂತ್ರೋಪಕರಣಗಳ ಸುರಕ್ಷತೆಗೆ ಧಕ್ಕೆಯುಂಟಾಗುತ್ತಿದೆ.

ವಿದ್ಯುತ್ ಅವಘಡಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಉಲ್ಲೇಖ (1) ಮತ್ತು (2) ರಲ್ಲಿ ಹಾಗೂ ವಿವಿಧ ಸಭೆಗಳಲ್ಲಿ ಹಲವಾರು ಬಾರಿ ಅಗತ್ಯ ಮಾರ್ಗಸೂಚಿಗಳನ್ನು ನೀಡಿದ್ದರೂ ಸಹ, ಅಧಿಕಾರಿಗಳು/ಸಿಬ್ಬಂಧಿಗಳು ನಿರ್ಲಕ್ಷ್ಯದಿಂದ ಸುರಕ್ಷಾ ಕ್ರಮಗಳನ್ನು ಕೈಗೊಳ್ಳದೇ ವಿದ್ಯುತ್ ಅವಘಡಗಳಿಗೆ ಕಾರಣವಾಗುತ್ತಿರುವುದು ವಿಷಾದನೀಯ. ವಿದ್ಯುತ್ ಅವಘಡಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ನಿರ್ವಹಣಾ ಹಾಗೂ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವ ಸಂದರ್ಭಗಳಲ್ಲಿ ಕಡ್ಡಾಯವಾಗಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

..2)

ಈ ನಿಟ್ಟಿನಲ್ಲಿ, ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾಶೀಲರಾಗಿ, ಸುರಕ್ಷತಾ ಕ್ರಮಗಳನ್ನು ಕೈಗೊಂಡ ನಂತರದಲ್ಲಿಯೇ ನಿಯತಕಾಲಿಕ ನಿರ್ವಹಣಾ ಹಾಗೂ ದುರಸ್ಥಿ ಕಾಮಗಾರಿಗಳನ್ನು ನಿರ್ವಹಿಸಲು ಸೂಚಿಸಲಾಗಿದೆ.

1. ಉಪಕರಣಗಳ/ಮಾರ್ಗಗಳ ಮಾರ್ಗಮುಕ್ತತೆಯನ್ನು ನೀಡುವ ಸಂದರ್ಭದಲ್ಲಿ, ಸಂಬಂಧಿಸಿದ ಮಾರ್ಗಗಳ ಬ್ರೇಕರ್‌ಗಳು ಟ್ರಿಪ್ ಆಗಿರುವ ಬಗ್ಗೆ ಹಾಗೂ ವಿದ್ಯುತ್ ಸಂಪರ್ಕದಿಂಧ ಪ್ರತ್ಯೇಕಗೊಳಸಿರುವ ಬಗ್ಗೆ ಖಾತ್ರಿ ಪಡಿಸಿಕೊಂಡ ನಂತರದಲ್ಲಿಯೇ ಜಿ.ಓ.ಎಸ್‌ಗಳನ್ನು ಕಾರ್ಯನಿರ್ವಹಿಸತಕ್ಕದ್ದು. ತದನಂತರದಲ್ಲಿ, ಅರ್ತಿಂಗ್ ಮಾಡಿದ ನಂತರದಲ್ಲಿ ಹಾಗೂ ಇನ್ನಿತರ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಿ, ಮಾರ್ಗಮುಕ್ತತೆಯನ್ನು ನೀಡತಕ್ಕದ್ದು. ಈ ಸಂಬಂಧ, ಸಂಬಂಧಿಸಿದ ಪಾಳಿ ಅಧಿಕಾರಿ/ಸಿಬ್ಬಂಧಿ ಖುದ್ದಾಗಿ ಸ್ಥಳದಲ್ಲಿ ಹಾಜರಿದ್ದು, ಅತ್ಯಂತ ಜಾಗರೂಕವಾಗಿ, ಜಿ.ಓ.ಎಸ್ ಬ್ಲೇಡ್‌ಗಳು ಪೂರ್ಣವಾಗಿ ತೆರೆದಿರುವ ಬಗ್ಗೆ ಹಾಗೂ ಸರಿಯಾದ ಕ್ರಮದಲ್ಲಿ ಅರ್ತಿಂಗ್ ಮಾಡಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಮಾರ್ಗಮುಕ್ತತೆಯನ್ನು ನೀಡುವುದು.

2. ಮಾರ್ಗಮುಕ್ತತೆಯನ್ನು ಪಡೆಯುವ ಅಧಿಕಾರಿಯೂ ಸಹ, ಕಾಮಗಾರಿ ನಿರ್ವಹಿಸುವ ಜಾಗದಲ್ಲಿ, ಅವಶ್ಯಕ ಅರ್ತಿಂಗ್ ಮಾಡಿದ ನಂತರದಲ್ಲಿಯೇ, ಕರ್ತವ್ಯವನ್ನು ನಿರ್ವಹಿಸುವುದು. ಯಾವುದೇ ಕಾರಣಕ್ಕೂ ಅರ್ತಿಂಗ್ ಮಾಡದೇ ಕಾಮಗಾರಿಗಳನ್ನು ನಿರ್ವಹಿಸತಕ್ಕದಲ್ಲ.

3. 11 ಕೆ.ವಿ ಎಂ.ಸಿ.ವಿ.ಸಿ.ಬಿ ಬ್ರೇಕರ್‌ಗಳು ಇರುವ ವಿ.ಸ್ವೀ.ಕೇಂದ್ರ/ವಿ.ವಿ.ಕೇಂದ್ರಗಳಲ್ಲಿ, ಬ್ರೇಕರ್‌ಗಳನ್ನು ಹೊರಗೆಳೆದು ವಿದ್ಯುತ್ ಸಂಪರ್ಕದಿಂಧ ಪ್ರತ್ಯೇಕಗೊಳಸಿರುವ ಬಗ್ಗೆ ಖಾತ್ರಿ ಪಡಿಸಿಕೊಂಡ ನಂತರದಲ್ಲಿಯೇ ಅರ್ತಿಂಗ್ ಮಾಡಿಸತಕ್ಕದ್ದು.

4. ನಿರ್ವಹಣಾ ಕರ್ತವ್ಯದ ಸಮಯದಲ್ಲಿ ಎಲ್ಲಾ ಅಧಿಕಾರಿಗಳು/ಸಿಬ್ಬಂಧಿಗಳು ಕಡ್ಡಾಯವಾಗಿ ಅವಶ್ಯಕ ಸುರಕ್ಷತಾ ಸಾಮಗ್ರಿಗಳಾದ ಹೆಲ್ಮೆಟ್, ಕೈಗವಸುಗಳು, ಸುರಕ್ಷತಾ ಬೆಲ್ಟ್, ಗಮ್ ಬೂಟ್‌ಗಳು ಇತ್ಯಾದಿಗಳನ್ನು ಉಪಯೋಗಿಸತಕ್ಕದ್ದು.

5. ಜಿ.ಓ.ಎಸ್‌ಗಳ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ, ಅವಶ್ಯಕವಾಗಿ ಕೈಗವಸುಗಳನ್ನು ಧರಿಸಿಕೊಂಡು ನಿರ್ವಹಿಸತಕ್ಕದ್ದು.

6. ಪ್ರಸರಣ ಮಾರ್ಗಗಳಲ್ಲಿ ಹಾಗೂ ವಿ.ವಿ.ಕೇಂದ್ರಗಳಲ್ಲಿ ಎತ್ತರದ ಜಾಗಗಳಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭಗಳಲ್ಲಿ ಅವಶ್ಯಕವಾಗಿ ಸುರಕ್ಷತಾ ಬೆಲ್ಟ್‌ಗಳನ್ನು ಉಪಯೋಗಿಸತಕ್ಕದ್ದು.

7. ಕಾಮಗಾರಿ ನಿರ್ವಹಿಸುವ ಸ್ಥಳವನ್ನು ನಿರ್ಬಂಧಗೊಳಿಸಿ ಯಾವುದೇ ಇತರ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶವನ್ನು ನಿಷೇಧಿಸತಕ್ಕದ್ದು.

8. ತುರ್ತು ಸಂದರ್ಭಗಳಲ್ಲಿ, ಬೆಂಕಿ ನಂದಿಸುವ ಸಲಕರಣೆಗಳು ಅತ್ಯಗತ್ಯವಾಗಿ ಬೇಕಾಗಿರುವುದರಿಂದ, ಒದಗಿಸಲಾಗಿರುವ ಬೆಂಕಿ ನಂದಿಸುವ ಉಪಕರಣ / ಸಲಕರಣೆಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಕಾಲಕಾಲಕ್ಕೆ ಪುನ: ಭರ್ತಿ ಮಾಡಿಸಿ ನಿರ್ವಹಿಸತಕ್ಕದ್ದು.

9. ಸ್ವಿಚ್‌ಯಾರ್ಡ್‌ನಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಅವಶ್ಯಕವಾಗಿ ಹೆಲ್ಮೆಟ್‌ಗಳನ್ನು ಧರಿಸುವುದು.

..3)

10. ಯಾವುದೇ ಕಾರಣಕ್ಕೂ ಕರ್ತವ್ಯನಿರತ ಸಿಬ್ಬಂಧಿಯು ಮೊಬೈಲ್ ಬಳಸುವುದನ್ನು ನಿಷೇಧಿಸತಕ್ಕದ್ದು.

11. ಕೆಲವೊಂದು ವಿ.ವಿ.ಕೇಂದ್ರಗಳಲ್ಲಿ ಶಕ್ತಿ ಪರಿವರ್ತಕಗಳಲ್ಲಿನ ತೈಲದ ಪ್ರಮಾಣ ಕಡಿಮೆಯಿದ್ದರೂ ಯಾವುದೇ ಕ್ರಮ ಕೈಗೊಳ್ಳದೇಯಿರುವುದನ್ನು ಗಮನಿಸಲಾಗಿದೆ. ಶಕ್ತಿ ಪರಿವರ್ತಕಗಳಲ್ಲಿನ ತೈಲ ಪ್ರಮಾಣವನ್ನು ದಿನವಹಿ ಗಮನಿಸಿ, ಯಾವುದೇ ಸೋರಿಕೆಯಿದ್ದಲ್ಲಿ ಅದನ್ನು ಸರಿಪಡಿಸಿ, ಅಗತ್ಯ ಪ್ರಮಾಣದ ತೈಲವನ್ನು ಶಕ್ತಿ ಪರಿವರ್ತಕದಲ್ಲಿರುವಂತೆ ನಿಗಾ ವಹಿಸತಕ್ಕದ್ದು.

12. ಬ್ಯಾಟರಿ ಹಾಗೂ ಬ್ಯಾಟರಿ ಚಾರ್ಜರ್‌ಗಳ ನಿಯತಕಾಲಿಕ ನಿರ್ವಹಣೆಯಿಂದ ಬ್ಯಾಟರಿಗಳ ಗುಣಮಟ್ಟ ಹಾಗೂ ಡಿ.ಸಿ.ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡುವುದು ಹಾಗೂ ಬ್ಯಾಟರಿಗಳ ನಿರ್ವಹಣೆ ಸಂದರ್ಭದಲ್ಲಿ ಕೈಗವಸುಗಳನ್ನು ಉಪಯೋಗಿಸತಕ್ಕದ್ದು.

13. ಸುರಕ್ಷಾ ಸಾಧನ-ಸಲಕರಣೆಗಳ ಗುಣಮಟ್ಟಗಳನ್ನು ಪರಿಶೀಲಿಸಿ, ಉತ್ತಮ ಗುಣಮಟ್ಟದ ವಸ್ತುಗಳನ್ನು ಬಳಸುವಂತೆ ಕ್ರಮ ಕೈಗೊಳ್ಳುವುದು.

14. ವಿದ್ಯುತ್ ಸ್ಥಾವರಗಳ ಕಛೇರಿಗಳಲ್ಲಿ, ಎಲ್ಲರಿಗೂ ಕಾಣುವಂತೆ, ಅಗ್ನಿಶಾಮಕ ದಳ, ಸಮೀಪದ ಆರಕ್ಷಕ ಠಾಣೆ, ತುರ್ತುವಾಹನ ಮತ್ತು ಆಸ್ಪತ್ರೆಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸತಕ್ಕದ್ದು.

ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಈಗಾಗಲೇ ನೋಡಲ್ ಅಧಿಕಾರಿಗಳನ್ನು ನಿಗಮದ ಆದೇಶ ಉಲ್ಲೇಖ-3 ರನ್ವಯ ಸುರಕ್ಷತಾ ಅಧಿಕಾರಿಗಳನ್ನಾಗಿ ಮಾಡಲಾಗಿದ್ದು, ತಮ್ಮ ವ್ಯಾಪ್ತಿಯಲ್ಲಿನ ವಿ.ಸ್ವೀ.ಕೇಂದ್ರ/ವಿ.ವಿ.ಕೇಂದ್ರಗಳ ಸುರಕ್ಷತೆಗೆ ಸಂಬಂಧಿಸಿದಂತೆ ಕ್ರಮ ವಹಿಸಲು ಆದೇಶದಲ್ಲಿ ಸೂಚಿಸಲಾಗಿದೆ.

ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಅಗತ್ಯ ಸುರಕ್ಷತಾ ಸಾಮಗ್ರಿಗಳು ಇರುವುದರ ಬಗ್ಗೆ ಖಾತ್ರಿಪಡಿಸಿಕೊಂಡು, ಅಗತ್ಯವಿರುವ ಸುರಕ್ಷಾ ಸಾಧನ/ಸಲಕರಣೆಗಳ ಪಟ್ಟಿಯನ್ನು ಪ್ರಸರಣ ವಲಯದ ಮುಖ್ಯ ಇಂಜಿನಿಯರ್ (ವಿ) ರವರ ಮುಖಾಂತರ ಖರೀದಿಸಲು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು. ಮುಖ್ಯ ಇಂಜಿನಿಯರ್ (ವಿ) ರವರು ಪ್ರತಿ 6 ತಿಂಗಳಿಗೊಮ್ಮೆ ಸಭೆ ಕರೆದು, ಅವಶ್ಯಕ ಸುರಕ್ಷಾ ಸಾಧನ/ಸಲಕರಣೆಗಳು ಒದಗಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು, ಅವಶ್ಯಕ ಬಜೆಟ್ ಮಂಜೂರಾತಿಗಾಗಿ ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) ರವರು, ಅವಶ್ಯಕ ಬಜೆಟ್ ಮಂಜೂರು ಮಾಡಲು ಕ್ರಮ ವಹಿಸುವುದು.

ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯರವರುಗಳು ವಲಯ ಮಟ್ಟದಲ್ಲಿ ಅವಶ್ಯಕ ತರಬೇತಿ ಶಿಬಿರ / ಕಾರ್ಯಾಗಾರಗಳನ್ನು ಆಯೋಜಿಸಿ ತಮ್ಮ ವ್ಯಾಪ್ತಿಯಲ್ಲಿನ ಅಧಿಕಾರಿ/ಸಿಬ್ಬಂದಿಗಳಿಗೆ ಸುರಕ್ಷತಾ ಕ್ರಮಗಳ ಕುರಿತು ಅರಿವು ಮೂಡಿಸುವಂತೆ ಕ್ರಮ ವಹಿಸುವುದು. ಈ ಸಂಬಂಧ ಸಾರ್ವಜನಿಕ ಸಂಪರ್ಕ ಸಭೆಯನ್ನು ಆಯೋಜಿಸಿ, ಸಾರ್ವಜನಿಕರಿಗೂ ಸಹ ಅರಿವು ಮೂಡಿಸಲು ಕ್ರಮ ವಹಿಸತಕ್ಕದ್ದು.

ಇಲಾಖೆಯ ಕೋಟ್ಯಂತರ ರೂ ಬೆಲೆಬಾಳುವ ಯಂತ್ರೋಪಕರಣಗಳ ರಕ್ಷಣೆ, ಮಾನವ ಜೀವದ ಸುರಕ್ಷತೆ ಹಾಗೂ ವಿದ್ಯುತ್ ಗ್ರಾಹಕರಿಗೆ ಭರವಸೆಯ ಹಾಗೂ ಗುಣಾತ್ಮಕ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ, ಎಲ್ಲಾ ಅಗತ್ಯ ಕ್ರಮ ಕೈಗೊಂಡು ವಿದ್ಯುತ್ ಅವಘಡಗಳು ಸಂಭವಿಸದಂತೆ ಕ್ರಮ ವಹಿಸುವುದು ಎಲ್ಲಾ ಜವಾಬ್ದಾರಿಯುತ ಅಧಿಕಾರಿಗಳ/ಸಿಬ್ಬಂಧಿಗಳ ಆದ್ಯ ಕರ್ತವ್ಯವಾಗಿರುತ್ತದೆ.

..4)

ಈ ಸಂಬಂಧ ಈಗಾಗಲೇ ಹೊರಡಿಸಲಾಗಿರುವ ಸುತ್ತೋಲೆಗಳಲ್ಲಿನ ಹಾಗೂ ಮೇಲ್ಕಂಡ ಸೂಚನೆಗಳನ್ನು, ಒಟ್ಟಾರೆಯಾಗಿ ಸುರಕ್ಷತಾ ಕ್ರಮಗಳಲ್ಲಿ ಅಗತ್ಯವಾದ ಶಿಸ್ತನ್ನು ಪಾಲಿಸಿ, ಎಲ್ಲಾ ಅಧಿಕಾರಿಗಳು ಅವರುಗಳ ಅಧಿಕಾರ ವ್ಯಾಪ್ತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಕಾರ್ಯೋನ್ಮುಖರಾಗಿ ವಿದ್ಯುತ್ ಅವಘಡಗಳು ಸಂಭವಿಸದಂತೆ ಕ್ರಮ ವಹಿಸಲು ಸೂಚಿಸಲಾಗಿದೆ. ಯಾವುದೇ ಅಧಿಕಾರಿ/ಸಿಬ್ಬಂದಿಯವರು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷ್ಯ ದೋರಣೆ ತೋರಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

9/3/2021
**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿದ್ಯುತ್) / (ಸಿವಿಲ್), ಕವಿಪ್ರನಿನಿ.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿದ್ಯುತ್)/(ಸಿವಿಲ್), ಕವಿಪ್ರನಿನಿ.
6. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
8. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕವಿಪ್ರನಿನಿ.
10. ಎಲ್ಲಾ ಸಹಾಯಕ ಇಂಜಿನಿಯರ್ (ವಿ), ಕವಿಪ್ರನಿನಿ.
11. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿ:**

ಅಧೀಕ್ಷಕ ಇಂಜಿನಿಯರ್(ವಿ), (ಐ.ಟಿ), ಕವಿಪ್ರನಿನಿ, ಬೆಂಗಳೂರುರವರಿಗೆ – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.